**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 2200/2022**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

ಸಾಕ್ಷಿದಾರರ ಹೆಸರು : ಮಹೇಂದ್ರ ಎಂ

ತಂದೆಯ ಹೆಸರು : ಮಂಜುನಾಥ ಜೆ

ವಯಸ್ಸು : **38 ವರ್ಷ**

ಉದ್ಯೋಗ : ವ್ಯವಸಾಯ

ವಾಸಸ್ಥಳ : ಬರಗೇನಹಳ್ಳಿ

**ದಿನಾಂಕ:28-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ದಿನಾಂಕ: **23-05-2023** ರಂದು ನನ್ನ ತಾಯಿ ರಂಗೇನಹಳ್ಳಿಯಿಂದ ಸಂತೆ ಮುಗಿಸಿಕೊಂಡು ನಡೆದುಕೊಂಡು ಹೋಗುತ್ತಿದ್ದು, ಅವರ ಜೊತೆ ನಾನು ಸಹ ಇದ್ದು, ನಾನು ಅವರಿಂದ **10** ಅಡಿ ಮುಂದೆ ಮೆಣಸಿನಕಾಯಿ ಚೀಲ ಹಿಡಿದುಕೊಂಡು ಹೋಗುತ್ತಿದ್ದೆ, ಅವರು ನನ್ನ ಹಿಂದೆ ನಡೆದುಕೊಂಡು ಬರುತ್ತಿದ್ದರು. ಹಿಂದೆಯಿಂದ ಅಶೋಕ್ ಎಂಬುವವರು ಒಂದು ದ್ವಿಚಕ್ರ ವಾಹನ ವನ್ನು ಜೋರಾಗಿ ಓಡಿಸಿಕೊಂಡು ಬಂದು ನನ್ನ ತಾಯಿಗೆ ಗುದ್ದಿಸಿದ ಕಾರಣ ಅವರು **10** ಅಡಿ ದೂರಕ್ಕೆ ಉಜ್ಜಿಕೊಂಡು ಹೋಗಿ ಬಿದ್ದಿದ್ದು, ತಕ್ಷಣ ನಾನು ಓಡಿ ಹೋಗಿ ಅವರನ್ನು ನೋಡಿದ್ದು, ನಂತರ ಅವರ ತಲೆಗೆ ಬಲವಾದ ಪೆಟ್ಟು ಆದ ಕಾರಣ ಅಲ್ಲೇ ಇದ್ದ ಕರಾವಳಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಕೊಡಿಸಿ, ಅಲ್ಲಿಂದ ಶಿವಮೊಗ್ಗದ ಮೆಟ್ರೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ **6** ದಿನಗಳ ಕಾಲ ಚಿಕಿತ್ಸೆ ನೀಡಿದ್ದು, ಚಿಕಿತ್ಸೆ ಫಲಕಾರಿಯಾಗದೆ ನನ್ನ ತಾಯಿ ಮೃತಪಟ್ಟಿರುತ್ತಾರೆ. ನಂತರ ಅವರ ಮೃತ ದೇಹವನ್ನು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ಶವಪಂಚನಾಮೆ ಜರುಗಿಸಿ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ದಿ: **24-5-2023** ರಂದು ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ದೂರನ್ನು ನೀಡಿದ ದಿನವೇ ಪೊಲೀಸರು ಬಂದು ಮಹಜರ್ ಕ್ರಮವನ್ನು ಸ್ಥಳದಲ್ಲಿ ಜರುಗಿಸಿರುತ್ತಾರೆ. ಆದಾದ ನಂತರ **2** ತಿಂಗಳು ಬಿಟ್ಟು ಪೊಲೀಸರು ಮತ್ತೆ ಮಹಜರ್

ಕ್ರಮವನ್ನು ಜರುಗಿಸಿರುತ್ತಾರೆ. ನನ್ನ ತಾಯಿ ಮೃತಪಟ್ಟ ನಂತರ ಮತ್ತೊಂದು ದೂರನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಎರಡು ದಾಖಲಾತಿಯನ್ನು ತೋರಿಸಲಾಗಿದ್ದು, ಅವು ದೂರಾಗಳಾಗಿದ್ದು, ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಸ್ಥಳ ಮಹಜರ್ ಆಗಿದ್ದು, ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

ಸಾಕ್ಷಿಗೆ ಮತ್ತೊಂದು ಛಾಯಚಿತ್ರವನ್ನು ತೋರಿಸಲಾಗಿದ್ದು, ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿಃ 16-05-2022 ರಂದು ನೀವು ಮತ್ತು ನಿಮ್ಮ ತಾಯಿ ರಂಗೇನಹಳ್ಳಿಗೆ ಸಂತೆಗೆ ಹೋಗಿ ಸಂತೆ ಮುಗಿಸಿಕೊಂಡು ಬ್ಯಾಗನ್ನು ಹಿಡಿದುಕೊಂಡು ರಸ್ತೆ ದಾಟುತ್ತಿದ್ದು, ನಿಮ್ಮ ಹಿಂದೆ ಇದ್ದ ನಿಮ್ಮ ತಾಯಿ ರಸ್ತೆ ದಾಟುತ್ತಿದ್ದಾಗ ಸಂಜೆ 5-45 ಗಂಟೆ ಸಮಯದಲ್ಲಿ ಕೆಎ 14 ಇ ಯು 3503 ಸ್ಪೆಂಡರ್ ಬೈಕಿನ ಚಾಲಕ ತರೀಕೆರೆ ಕಡೆಯಿಂದ ಲಕ್ಕವಳ್ಳಿ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮ್ಮ ತಾಯಿಗೆ ಡಿಕ್ಕಿ ಪಡಿಸಿದ ಪರಿಣಾಮ ಅವರಿಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ದಿಃ 18-05-2022 ರಂದು ಲಕ್ಕವಳ್ಳಿ ಪೊಲೀಸ್ ಠಾಣೆಗೆ ಹಾಜರಾಗಿ ದೂರು ಸಲ್ಲಿಸಿರುತ್ತೀರಾ ಎಂದರೆ ಸರಿ. ನಂತರ ನಿಮ್ಮ ತಾಯಿ ಚಿಕಿತ್ಸೆ ಫಲಕಾರಿಯಾಗದೇ ಮೃತ ಹೊಂದಿದ ನಂತರ ದಿಃ 24-05-2022 ರಂದು ಮತ್ತೊಂದು ದೂರನ್ನು ನೀಡಿರುತ್ತೀರಾ ಎಂದರೆ ಸರಿ. ದಿಃ 19-05-2022 ರಂದು ಬೆಳಿಗ್ಗೆ 11-00 ರಿಂದ 12-00 ಗಂಟೆಯ ಸಮಯದಲ್ಲಿ ರಂಗೇನಹಳ್ಳಿ ಗ್ರಾಮದಲ್ಲಿ ಹಾದುಹೋಗಿರುವ ಲಕ್ಕವಳ್ಳಿ ರಂಗೇನಹಳ್ಳಿ ರಾಜ್ಯ ಹೆದ್ದಾರಿ ಸಂಖ್ಯೆ 57 ರಲ್ಲಿನ ರಂಗೇನಹಳ್ಳಿಯ

ಆನಂದ್ ಟೆಕ್ಸ್‌ಟೈಲ್ಸ್ ರವರ ಮುಂದಿನ ಟಾರು ರಸ್ತೆಯಲ್ಲಿ ಪೊಲೀಸರು ಮಹಜರ್ ಮಾಡಿದ್ದು, ಸದರಿ ಮಹಜರಿಗೆ ನೀವು ಸಹಿ ಮಾಡಿರುತ್ತೀರಾ ಎಂದರೆ ಸರಿ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಜೆ ಟಿ ಜೆ **ವಕೀಲರಿಂದ.**

ನಿಪಿ-1 ರಲ್ಲಿರುವ ದೂರನ್ನು ನಾವು ಹೇಳಿದಂತೆ ಬೆರಳಚ್ಚು ಮಾಡಿರುತ್ತಾರೆ, ಅದರಲ್ಲಿರುವ ಸಂಗತಿಗಳು ಸತ್ಯದಿಂದ ಕೂಡಿರುತ್ತದೆ. ನಿಪಿ-2 ದೂರನ್ನು ನನ್ನ ಅಣ್ಣನವರು ಕೈಯಿಂದ ಬರೆದಿರುತ್ತಾರೆ. ಅದನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ. ಘಟನೆ ಆದ ದಿನ ರಂಗೇನಹಳ್ಳಿಯಲ್ಲಿ ಸಂತೆ ಇರುತ್ತದೆ ಎಂದರೆ ಸರಿ. ಸಂತೆಯಾದ ಕಾರಣ ಅಲ್ಲಿ ಬಹಳ ಜನ ಸೇರಿದ್ದರು ಎಂದರೆ ಸರಿ. ಅಪಘಾತವಾದ ಸಮಯದಲ್ಲೂ ಸಹ ಜನಸಂದಣಿ ಬಹಳ ಇತ್ತು ಎಂದರೆ ಸರಿ. ನೀವು ರಸ್ತೆಯನ್ನು ದಾಟಿದ ಕಾರಣ ನಿಮ್ಮ ತಾಯಿ ನಿಮ್ಮನ್ನು ನೋಡಿ ಅಚ್ಚಾನಕ್ಕಾಗಿ ರಸ್ತೆ ಮಧ್ಯೆ ಬಂದಿರುತ್ತಾರೆಂದರೆ ಸಾಕ್ಷಿ ಇಲ್ಲ ಅವರು ನಿಧಾನವಾಗೇ ಬಂದರು ಎಂದು ನುಡಿದಿರುತ್ತಾರೆ. ಅವರಿಗೆ ವಯಸ್ಸಾದ ಕಾರಣ ಅವರು ರಸ್ತೆಯನ್ನು ದಾಟಲು ಆಗುತ್ತಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಅಂತಹ ವಯಸ್ಸು ಆಗಿರುವುದಿಲ್ಲ, ರಸ್ತೆಯನ್ನು ಅರಾಮವಾಗಿ ದಾಟಲು ಬರುತ್ತಿತ್ತು ಎಂದು ನುಡಿದಿರುತ್ತಾರೆ. ನಿಮ್ಮ ತಾಯಿಗೆ 65 ರಿಂದ 70 ವಯಸ್ಸಾಗಿತ್ತು ಎಂದರೆ ಸಾಕ್ಷಿ ಅವರಿಗೆ 52 ರಿಂದ 53 ವಯಸ್ಸಾಗಿತ್ತು ಎಂದು ನುಡಿದಿರುತ್ತಾರೆ. ಆ ದಿನ ಸಂತೆ ಇದ್ದ ಕಾರಣ ಬಹಳ ಜನಸಂದಣಿ ಇದ್ದು, ಎಲ್ಲಾ ವಾಹನಗಳು ನಿಧಾನವಾಗಿ ಬರುತ್ತಿದ್ದು, ಆರೋಪಿಯು ಸಹ ಅವರ ವಾಹನವನ್ನು ನಿಧಾನವಾಗಿ ಬರುತ್ತಿದ್ದು, ನಿಮ್ಮ ತಾಯಿ ಅಡ್ಡ ಬಂದ ಕಾರಣ ನಿಯಂತ್ರಣ ಮಾಡಲಾಗದೇ ವಾಹನದ ಹ್ಯಾಂಡಲ್ ತಗಲಿರುತ್ತದೆ ಎಂದರೆ ಸಾಕ್ಷಿ ಆರೋಪಿಯು ಅವರ ವಾಹನವನ್ನು ಅತೀವೇಗವಾಗಿ ಓಡಿಸಿಕೊಂಡು ಬಂದು ವಾಹನ ನಿಯಂತ್ರಣ ಮಾಡಲಾಗದೇ ನನ್ನ ತಾಯಿಗೆ ಡಿಕ್ಕಿಪಡಿಸಿದ ಕಾರಣ 10 ಅಡಿ ದೂರಕ್ಕೆ ತರಚಿಕೊಂಡು ಹೋಗಿ ಬಿದ್ದಿರುತ್ತಾರೆಂದು ನುಡಿದಿರುತ್ತಾರೆ. ನಿಮ್ಮ ತಾಯಿ ರಸ್ತೆಗೆ ಅಚ್ಚಾನಕ್ಕಾಗಿ ಬಂದ ಕಾರಣ ಅಪಘಾತ ಸಂಭವಿಸಿರುತ್ತದೆ, ಆರೋಪಿಯ ತಪ್ಪಿನಿಂದ ಅಲ್ಲ ಎಂದರೆ ಸಾಕ್ಷಿಯು ಆರೋಪಿಯು ವೇಗವಾಗಿ ಬಂದು ಡಿಕ್ಕಿಪಡಿಸಿದ ಕಾರಣ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿಯಿಂದ ಯಾವುದೇ ಅಪಘಾತ ಆಗದಿದ್ದರೂ ಸಹ ಪರಿಹಾರ ಪಡೆಯಲು ಆರೋಪಿಯ ಮೇಲೆ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ, ನೀವು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆಂದು ನುಡಿದಿರುತ್ತಾರೆ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**